ಶ್ರೀ ಆರ್. ಎಲ್. ಜಾಲಪ್ಪ.—ದುರಾದೃಷ್ಟವಶಾತ್ ಇದೆಲ್ಲವನ್ನೂ ಲೋಯರ್ ಕೋರ್ಟ್‌ನಲ್ಲಿ ಹಾಕುವುದಿಲ್ಲ. ಇದೆಲ್ಲವನ್ನೂ directly ಸೆಷನ್ಸ್ ಕೋರ್ಟಿನಲ್ಲಿ ಫೈಲ್ ಮಾಡುತ್ತಾರೆ. ಅಲ್ಲಿ ಏನು ಮಾಡುವುದಕ್ಕೂ ಆಗುವುದಿಲ್ಲ.

ಗಮನ ಸೆಳೆಯುವ ಸೂಚನೆಗಳು

(1) ವಿಧಾನಸಭಾ ಸದಸ್ಯ ಶ್ರೀ ಎಂ.ಎಸ್ ಕೃಷ್ಣನ್ ಮತ್ತು ಅವರ ಅನುಯಾಯಿಗಳ ಮೇಲೆ ಬೆಂಗಳೂರು ನಂದಿನಿ ಲೇಔಟ್‌ನಲ್ಲಿ ನಡೆದಿರುವ ಹಲ್ಲೆಯ ವಿಚಾರ.

ಶ್ರೀ ಟಿ. ಎಸ್. ಮಣಿ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ನಂದಿನಿ ಲೇಔಟ್‌ನಲ್ಲಿ ದಿನಾಂಕ ೨-೩-೧೯೮೮ ರಂದು ವಿಧಾನಸಭಾ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್ ಹಾಗೂ ಅವರ ಅನುಯಾಯಿಗಳ ಮೇಲೆ ನಡೆದಿರುವ ಹಲ್ಲೆಯ ಬಗ್ಗೆ ಮಾನ್ಯ ಗೃಹಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಆರ್. ಎಲ್ ಜಾಲಪ್ಪ (ಮಾನ್ಯ ಗೃಹ ಮಂತ್ರಿಗಳು) —ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ಗಮನ ಸೆಳೆಯುವ ಸೂಚನೆಗೆ ಈ ಲಿಖಿತ ಹೇಳಿಕೆಯನ್ನು ತಮ್ಮ ಅನುಮತಿಯನ್ನು ಪಡೆದು ನೀಡಲು ಬಯಸುತ್ತೇನೆ.

ದಿನಾಂಕ ೨೯-೨-೮೮ ಮತ್ತು ೧-೩-೮೮ ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಂದಿನಿ ಲೇ ಔಟ್‌ನಲ್ಲಿ ಅಕ್ರಮವಾಗಿ ಕಟ್ಟಿದ್ದ ಕಟ್ಟಡಗಳನ್ನು ನೆಲಸಮ ಮಾಡಿತ್ತು. ಆಬಗ್ಗೆ ವಿಚಾರಿಸಲು ದಿನಾಂಕ ೨-೩-೮೮ ರಂದು ಬೆಳಿಗ್ಗೆ ೧೦-೩೦ ಗಂಟೆಗೆ ಶ್ರೀ ಎಂ. ಎಸ್. ಕೃಷ್ಣನ್, ವಿಧಾನ ಸಭಾ ಸದಸ್ಯರು ತಮ್ಮ ಅನುಯಾಯಿಗಳಾದ ಶ್ರೀ ಮೋಹನರಾಂ, ಶ್ರೀ ಗಣಪತಿ ಮತ್ತು ಇತರೆ ಇಬ್ಬರೊಡನೆ ಭೇಟಿ ಕೊಟ್ಟಿರುತ್ತಾರೆ. ಅವರು ತಮ್ಮ ಕಾರಿನಲ್ಲಿ ಸಂಚರಿಸುತ್ತಿರುವಾಗ ಕೆಲವೊಂದು ಜನರು ಅವರನ್ನು ಹಿಂದಿನ ಎರಡು ದಿನಗಳಲ್ಲಿ ನೆಲಸಮ ಕಾರ್ಯ ನಡೆಯುವಾಗ ಏಕೆ ಭೇಟಿ ಕೊಡಲಿಲ್ಲ ಎಂದು ಪ್ರಶ್ನಿಸಿರುತ್ತಾರೆ. ಶ್ರೀ ಕೃಷ್ಣನ್‌ರವರ ವಿವರಣೆಯು ತೃಪ್ತಿಕರವಾಗಿಲ್ಲವೆಂದು ಕೆಲವು ಜನರು ಶಾಸಕರ ಮೇಲೆ ಕೈಗಳಿಂದ ಮತ್ತು ದೊಣ್ಣೆಗಳಿಂದ ಹಲ್ಲೆ ನಡೆಸಿರುತ್ತಾರೆ ಅವರುಗಳು ಶಾಸಕರ ಕಾರಿನ ಮುಂದಿನ ಗಾಜನ್ನು ಒಡೆದಿರುತ್ತಾರೆ. ಶ್ರೀ ಎಂ.ಎಸ್. ಕೃಷ್ಣನ್‌ರವರ ಅನುಯಾಯಿಗಳಾದ ಶ್ರೀ ಮೋಹನರಾಂ ಮತ್ತು ಶ್ರೀ ಗಣಪತಿ, ಶ್ರೀ ಕೃಷ್ಣನ್‌ರವರ ಮೇಲೆ ಹಲ್ಲೆ ನಡೆಯುತ್ತಿದ್ದನ್ನು ತಪ್ಪಿಸಲು ಪ್ರಯತ್ನಿಸಿದಾಗ ಅವರಿಗೂ ಸಹ ಹೊಡೆಯುಲಾಗಿ ಕೆಲವೊಂದು ಸಣ್ಣಪುಟ್ಟ ಗಾಯಗಳು ಕೆನ್ನೆಯ ಮೇಲೆ ಆಗಿರುತ್ತವೆ ಶ್ರೀ ಕೃಷ್ಣನ್‌ರವರಿಗೆ ಮುಖದ ಮೇಲೆ ಮತ್ತು ಬೆನ್ನ ಮೇಲೆ ಬಾಸುಂಡೆಗಳು ಬಂದಿರುತ್ತದೆ. ಈ ಘಟನೆ ನಡೆದ ನಂತರ ಶ್ರೀ ಕೃಷ್ಣನ್‌ರವರು ಆರ್ ಎಂ ಸಿ. ಪೊಲೀಸ್ ಸ್ಟೇಷನ್‌ಗೆ ಹೋಗಿ ವಿಷಯವನ್ನು ತಿಳಿಸಿರುತ್ತಾರೆ. ಗಾಯಗೊಂಡ ಮೂವರು ಕೆ.ಸಿ ಜನರಲ್ ಆಸ್ಪತ್ರೆಗೆ ಹೋಗಿ ಅಲ್ಲಿ ಸ್ವತಃ ಹೊರರೋಗಿಗಳಾಗಿ ಚಿಕಿತ್ಸೆ ಪಡೆದಿರುತ್ತಾರೆ. ಈ ಬಗ್ಗೆ ಮಂಹಾಲಕ್ಷ್ಮಿ ಪೊಲೀಸ್ ಠಾಣೆಯವರು ಕೇಸು ದಾಖಲು ಮಾಡಿಕೊಂಡಿರುತ್ತಾರೆ.

ಮೇಲಿನ ಕೇಸಿಗೆ ಸಂಬಂಧಪಟ್ಟ ಅಪರಾಧಿಗಳಾದ (೧) ಶ್ರೀ ಸತ್ಯನಾರಾಯಣ (೨) ಶ್ರೀ ಅಶ್ವತ ನಾರಾಯಣಗೌಡ (೩) ಶ್ರೀ ಎಸ್. ಕೃಷ್ಣಪ್ಪ ಅಲಿಯಾಸ್ ಕಿಟ್ಟಿ ಇವರುಗಳನ್ನು ದಿನಾಂಕ ೩-೩-೮೮ ರಂದು ದಸ್ತಗಿರಿ ಮಾಡಿ ೪-೩-೮೮ ರಂದು ನ್ಯಾಯಾಲಯದ ಮುಂದೆ ಹಾಜರು ಮಾಡಲಾಗಿ ಅವರುಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಮತ್ತೊಬ್ಬ ಅಪರಾಧಿ ಶ್ರೀ ಸಂತಿ ಶಿವಣ್ಣ, ಇವನ್ನು ೫-೩-೮೮ ರಲ್ಲಿ ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಇನ್ನೂ ೩ ಜನ ಆರೋಪಿಗಳು ತಲೆ ತಪ್ಪಿಸಿಕೊಂಡಿರುತ್ತಾರೆ. ಅವರುಗಳನ್ನು ಪತ್ತೆ ಹೆಚ್ಚಲು ಎಲ್ಲಾ ಪ್ರಯತ್ನಗಳು ಮಾತಲಾಗುತ್ತಿವೆ. ಮಾನ್ಯ ಅಧ್ಯಕ್ಷರೇ ಇವರು ನಂದಿನಿ ಲೇಔಟ್‌ಗೆ ಹೋಗುತ್ತಾರೆ ಎಂಬುದು ಪೋಲೀಸರಿಗೆ ಗೊತ್ತಿದ್ದರೆ ಅವರೂ ಜೊತೆಯಲ್ಲಿ ಹೋಗಿ ಪ್ರೊಟೆಕ್ಷನ್ ಕೊಡುತ್ತಿದ್ದರು. ಇದು ನಮಗೆ ಯಾರಿಗೂ ಗೊತ್ತಿರಲಿಲ್ಲ. ಇದು ಗೊತ್ತಾದ ತಕ್ಷಣ ನಾವು ಸೂಕ್ತ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಟಿ. ಎಸ್. ಮಣಿ.—ಶ್ರೀ ಕೃಷ್ಣನ್ ಅವರು ಎಂ.ಎಲ್.ಎ ಆಗಿದ್ದಾರೆ, ಇವರಿಗೆ ಸರಕಾರ ಏತಕ್ಕೆ ಪ್ರೊಟೆಕ್ಷನ್ ಕೊಡಲಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಅವರು ಕೇಳಲಿಲ್ಲ. ಕೇಳಿದ್ದರೆ ಕೊಡುತ್ತಿದ್ದೆವು. ಅದು ನಮ್ಮ ಕರ್ತವ್ಯ. ಪ್ರೊಟೆಕ್ಷನ್ ಕೊಡಿ ಎಂದು ಅವರು ಕೇಳಲಿಲ್ಲ. We did not know as to when he was going and where he was going. If he asks us it is our duty to provide him security.

ಶ್ರೀ ಟಿ ಎಸ್. ಮಣಿ.—ಅಲ್ಲಿ ಬಂದು tension ಇರುವ ಸಮಯದಲ್ಲಿ ಎಂ.ಎಲ್.ಎ. ಅವರು ಅಲ್ಲಿಗೆ ಹೋದರೆ ಅವರಿಗೆ ಪ್ರಾಪರ್ ಪ್ರೊಟೆಕ್ಷನ್ ಕೊಡಬೇಕಾಗಿತ್ತಲ್ಲ.

ಶ್ರೀ ಆರ್. ಎಲ್ ಜಾಲಪ್ಪ.—ಸ್ವಾಮಿ, ಎಂ.ಎಲ್.ಎ. ಅವರು ನಮಗೆ ತಿಳಿಸದಿದ್ದರೆ ಹೇಗೆ ನಮಗೆ ಗೊತ್ತಾಗಬೇಕು ? ನಾವು ಬೇಕಾದಷ್ಟು ಕಡೆ ರಕ್ಷಣೆ ಕೊಟ್ಟಿದ್ದೇವೆ. ಎಷ್ಟೋ ಜನ ನಾಗರೀಕರಿಗೆ ರಕ್ಷಣೆ ಕೊಟ್ಟಿದ್ದೇವೆ, ಇನ್ನು ಎಂ.ಎಲ್.ಎ ಗಳಿಗೆ ಕೊಡುವುದಿಲ್ಲವೇ ? ಒಂದು ವೇಳೆ ಕೊಡದಿದ್ದರೆ ನಮ್ಮ ಕರ್ತವ್ಯ ಪಾಲನೆ ಮಾಡಿದಂತೆ ಆಗುವುದಿಲ್ಲ. We do not deserve to be a government then. ಈ ಘಟನೆ ಗೊತ್ತಾದ ತಕ್ಷಣ ನಾನು ಪೋಲೀಸಿನವರನ್ನು ಕರೆಸಿ ವಿಚಾರಿಸಿದೆ, ಅವರು ಹೇಳಿದರು. ಸ್ವಾಮಿ ಅವರು ಹೋಗುವುದು ನಮಗೂ ಗೊತ್ತಿಲ್ಲ, ಗೊತ್ತಿದ್ದರೆ ನಾವು ರಕ್ಷಣೆ ಕೊಡುತ್ತಿದ್ದೇವೆಂದು. ಇದು ಗೊತ್ತಾದ ತಕ್ಷಣ ನಾವು ಸ್ಪಾಟ್‌ಗೆ ಹೋದೆವು ಎಂದು ಅವರು ಹೇಳಿದರು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇನ್ನೊಂದು ಗಮನ ಸೆಳೆಯುವ ಸೂಚನೆಯ ಬಗ್ಗೆ ಉತ್ತರ ರೆಡಿಯಾಗಿದೆ ಆದರೆ ಕಾಪಿಗಳು ಇಲ್ಲ. ಆದ್ದರಿಂದ ದಯವಿಟ್ಟು ಸೋಮವಾರ ತೆಗೆದು ಕೊಳ್ಳಿ.

ಶ್ರೀ ವೇದಾಂತ ಹೆಮ್ಮಿಗೆ.—ಸ್ವಾಮಿ ನಾನು ಕಳುಹಿಸಿಕೊಟ್ಟಿದ್ದಂತಹ ಸೂಚನೆಯಲ್ಲಿ ಬಹಳ ಪ್ರಮುಖವಾದಂತಹ ವಿಷಯವನ್ನೇ ಬಿಟ್ಟಿದ್ದಾರೆ. ನಾನು ಕಳುಹಿಸಿಕೊಟ್ಟಿದ್ದ ವಿಷಯವೇನೆಂದರೆ ಮೈಸೂರು ರಾಜವಂಶಕ್ಕೆ ಸೇರಿದ ಪ್ರಾಚ್ಯವಸ್ತುಗಳ ವಸ್ತು ಪ್ರದರ್ಶನದ ಬಗ್ಗೆ ಆ ವಿಷಯವಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ತಪ್ಪಾಗಿದ್ದರೆ ಈಗ ಸರಿ ಮಾಡಿಕೊಳ್ಳಬೇಕೆಂದು ನನ್ನ ವಿನಂತಿ.

ಅಧ್ಯಕ್ಷರು.—ಆಯಿತು, ಸೋಮವಾರ ತೆಗೆದುಕೊಳ್ಳೋಣ.

ನಿಯಮ ೩೩೪ರ ಮೇರೆಗೆ

೧ ಜಮಖಂಡಿ ತಾಲ್ಲೂಕು ಜಂಬಗಿಯ ಶ್ರೀಮತಿ ಮಹಾದೇವಿ ಎನ್ನುವ ಯುವತಿಯ ಮರಣದ ಬಗ್ಗೆ.

ಶ್ರೀ ಬಾಬುರೆಡ್ಡಿ ವಿ. ತಂಗಳ್.—ಮಾನ್ಯ ಅಧ್ಯಕ್ಷರೇ, ಜಮಖಂಡಿ ತಾಲ್ಲೂಕಿನ ಸಾವಳಗಿ ಪೋಲೀಸ್ ಠಾಣೆಯ ಚಿಕ್ಕಜಂಬಗಿ ಗ್ರಾಮದಲ್ಲಿ ಶ್ರೀಮತಿ ಮಹಾದೇವಿ ಮಲಕಣ್ಣವರ ಎಂಬ ೧೯ ವರ್ಷದ ಯುವತಿಯ ಕೊಲೆ ನಡೆದಿದೆ. ಶಿವಪ್ಪ ಮಲಕಣ್ಣವರ ಎಂಬುವನನ್ನು ಮದುವೆಯಾಗಿದ್ದ. ಈಕೆ ಅಥಣಿ ತಾಲ್ಲೂಕಿನ ಅವರಗೋಡ ಗ್ರಾಮದ ಶ್ರೀ ಗೌಡಪ್ಪ ಪಾಟೀಲ ಎಂಬುವರ ಮಗಳು. ಈಕೆ ಗಂಡನ ಮನೆಗೆ ಹೋದ ಕೂಡಲೇ ತವರು ಮನೆಯಿಂದ ಹಣ ಮತ್ತು ಬಂಗಾರ ತರಬೇಕೆಂದು ಆಕೆಯನ್ನು ಹಿಂಸೆಗೊಳಪಡಿಸಲಾಯಿತು. ಲಗ್ನವಾದ ಮೇಲೆ ಆಕೆ ಗಂಡನ ಮನೆಯಲ್ಲಿಯೇ ಕೇವಲ ಒಂದು ತಿಂಗಳು ಇದ್ದು ಈ ಅವಧಿಯಲ್ಲಿ ಅಪಾರ ಕಿರುಕುಳ ಅನುಭವಿಸಿದಳು. ೧೯೮೭ರ ಅಕ್ಟೋಬರ್ ೮ರಂದು ಆಕೆ ಕೊಲೆಯಾದ ಸುದ್ದಿ ತಂದೆತಾಯಿಗಳಿಗೆ ತಲುಪಿತು. ತಂದೆತಾಯಿಗಳು ಧಾವಿಸಿ ಬಂದು ಆಕೆಯ ಪತಿ ಮತ್ತು ಭಾವ ಸೇರಿಕೊಂಡು ಆಕೆಯು ಕೊಲೆ ಮಾಡಿದ್ದಾರೆಂದು ದೂರು ಕೊಟ್ಟರೂ ಸಾವಳಗಿಯ ಪಿ ಎಸ್.ಐ. ಆ ದೂರನ್ನು ಸ್ವೀಕರಿಸದೆ ಮಹಾದೇವಿಯ ತಂದೆಯ ಕಡೆಯಿಂದ ಕೆಲವು ಬಿಳಿ ಹಾಳೆಗಳ ಮೇಲೆ ಒತ್ತಾಯದಿಂದ ಹೆಬ್ಬೆರಳು ಊರಿಸಿಕೊಂಡು ಶವ ಪರೀಕ್ಷೆಯ ನಂತರ ಮಹಾದೇವಿಯ ತಂದೆತಾಯಿಗಳ ವಶಕ್ಕೆ ಶವವನ್ನು ಕೊಡದೆ ತರಾತುರಿಯಿಂದ ಆಕೆಯ ಅಂತ್ಯಕ್ರಿಯೆ ನಡಿಸಲಾಯಿತು ಅಲ್ಲದೆ ನ್ಯಾಯ ಕೇಳಿದ ಮಹಾದೇವಿಯ ತಂದೆತಾಯಿಗಳನ್ನು ಬೆದರಿಸಲಾಯಿತು. ಗೌಡಪ್ಪ ಪಾಟೀಲರ ಮಗಳ ಕೊಲೆಯ ಸಮಾಚಾರ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ೧೯ ವರ್ಷದ ಹದಿಹರೆಯದ ಮುಗ್ಧ